

# ತೆರೆಯದ
# ಕಿಟಕಿ

ತೆರೆಯದ ಕಿಟಕಿಯಲೂ
ಬೆಳಕಿನ ತುಣುಕು ನುಸುಳಿ
ಪಾರಿಜಾತ ಘಮ್ಮೆಂದ ಗಳಿಗೆಯೊಂದಿತ್ತು

ಇದೇ ಕಿಟಕಿಯಲಿ
ಸದಾ ಗಿಜುಗುಡುವ ರಸ್ತೆ
ಮೊಳ ಮಾರು ತೂಗಳೆಯದಷ್ಟು
ಸರಾಗ ನಡೆದೆ ಇತ್ತಲ್ಲ ಎಲ್ಲದೂ...
ಓ!...
ಆ ಮನೆಯ ಕವಾಟಗಳೆದುರು
ಎದೆ ತುಂಬುವ ಬಣ್ಣಗಳು
ಆಟಿಕೆ ಮಾಡಿ ಮಾರಿಕೊಂಡರೇ?!

ಆದೇ ಕಿಟಕಿಯಲಿ
ಜೀರುಂಡೆ ಸದ್ದೊಂದೆ
ಉದ್ದಗಲಕ್ಕೂ ಬೆತ್ತಲಾದ ರಸ್ತೆಗಳು
ಬಾಗದ ಕಡುರಾತ್ರಿ
ಮತ್ತೆ ಮತ್ತೆ ತನ್ನೆಡೆ ಎಳೆವ
ಥೇಟ್ ಆಕಾಶಕಾಯಗಳಾಚೆಗಿನ
ಕಪ್ಪುರಂಧ್ರದಂತೆ

ತೆರೆದ ಮನೆ ಬಾಗಿಲಿನ
ಕಟ್ಟೆ ಮೇಲೊಂದು ಮಾತು
ಹಾಲು, ಸಕ್ಕರೆ ಕಡ ತರುವಷ್ಟು ಕಿಟಕಿ
ಹೂವಾಗಲು ತುಸು ಬೆಳಕು...

ಮನೆ ಸುತ್ತ ಕಟ್ಟಿಕೊಂಡ
ಆಳೆತ್ತರದ ಗೋಡೆಗಳು ಉರುಳಬೇಕಿವೆ.



**ರೇಖಾ ರಂಗನಾಥ**

ಕಲೆ: ವಾಗೀಶ ಹೆಗಡೆ